ಈ ಮಳೆ ನೀರಿನ ಚರಂಡಿಗೆ ಬಿಟ್ಟಿರುತ್ತಾರೆ.

೨) ಹೌದು.

೩) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಮತ್ತು ಆಯುಕ್ತರು, ಬೆಂಗಳೂರು ಮಹಾನಗರಪಾಲಿಕೆಯವರನ್ನು ಮಳೆಯ ನೀರನ್ನು ಒಳಚರಂಡಿಯ ಕೊಳಚೆ ನೀರಿಗೆ ಸೇರದಂತೆ ಪ್ರತಿಬಂಧಕ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿದೆ.

ಡಾ: ಎ. ಬಿ. ಮಲಕರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಒಳಚರಂಡಿ ಮಂಡಳಿಯವರು ಅನೇಕ ಕಾಲೋನಿಗಳಲ್ಲಿ ಸ್ಯೂವರೇಜ್ ಸಿಸ್ಟಮ್ ಕನೆಕ್ಷನ್ ಸರಿಯಾಗಿ ಮಾಡಿಕೊಟ್ಟಿಲ್ಲ. ಮತ್ತು ಕೆಲವು ಕಡೆ ಒಳಚರಂಡಿ ನೀರು ಸರಾಗವಾಗಿ ಹೋಗಲು ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ನಿರ್ದಿಷ್ಟವಾದ ಒಂದು ಉದಾಹರಣೆಯನ್ನು ಹೇಳುವುದಾದರೆ ರಾಮಯ್ಯ ಮೆಡಿಕಲ್ ಕಾಲೇಜ್ ಏನಿದೆ, ಅದರ ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಬಿದ್ದ ನೀರು ಒಳಚರಂಡಿಯ ಮೂಲಕ ಹೋಗದಂತೆ ಮಾಡದೇ ಇರುವುದರಿಂದ ಅಲ್ಲಿಯ ವಾತಾವರಣ ಕಲುಷಿತವಾಗಿದೆ. ಇದು ಒಂದನೆಯದು; ಎರಡನೆಯದಾಗಿ, ಮಳೆಗಾಲದಲ್ಲಿ ರೈನ್ ವಾಟರ್ ಜೊತೆ ಒಳಚರಂಡಿಯ ನೀರು ಹೋಗಿ ವಾಟರ್ ಸಪ್ಲೈ ಕೂಡ ಕಂಟಾಮಿನೇಟ್ ಆಗುತ್ತಿದೆ. ಹೀಗಾಗಿ ಈ ಎರಡು ದೃಷ್ಟಿಯಿಂದ ಅಲ್ಲಿಯ ಜನರಿಗೆ ತೊಂದರೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಇಲ್ಲಿ ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದುದು.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ಅಲ್ಲಿ ಏನಾಗಿದೆಯೆಂದರೆ ಕೆಲವು ಅನ್‌ಆಥರೈಸ್ಡ್ ಲೇಔಟ್ ಆಗಿದ್ದು, ಅಲ್ಲಿ ಸಾಕಷ್ಟು ಮನೆಗಳು ಬಂದಿವೆ. ನಮ್ಮ ಲೇಔಟ್‌ಗಳಲ್ಲಿ ಅಥವಾ ಕಾರ್ಪೋರೇಷನ್ ಏರಿಯಾಗಳಲ್ಲಿ ನಾವು ಸ್ಯೂವರೇಜ್ ವಾಟರ್ ಮತ್ತು ರೈನ್ ವಾಟರ್‌ನ್ನು, ಅದು ಎಲ್ಲಿಂದಲೇ ಬರಲಿ ಅದನ್ನು ಸೆಪರೇಟ್ ಆಗಿ ತೆಗೆದುಕೊಂಡು ಹೋಗುತ್ತಿದ್ದೇವೆ. ಅನ್‌ಆಥರೈಸ್ಡ್ ಲೇಔಟ್‌ಗಳಲ್ಲಿ ಸುಮಾರು ಒಂದು ಲಕ್ಷ, ಒಂದೂವರೆ ಲಕ್ಷ ಮನೆಗಳು ಈಗ ಬಂದಿರಬಹುದು. ಅಂಥ ಲೇಔಟ್‌ಗಳು ಬಂದಿರುವುದರಿಂದ ಈಗಾಗಲೇ ನಾವು ಅವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇವುಗಳನ್ನು ರೆಗ್ಯುಲರೈಸ್ ಮಾಡಿದ ಮೇಲೆ ಬಹುಶಃ ಅಲ್ಲಿ ಡ್ರೈನೇಜ್ ವ್ಯವಸ್ಥೆ ಮಾಡಿಕೊಡಬಹುದು. ತಾವು ಹೇಳಿದ ರಾಮಯ್ಯ ಮೆಡಿಕಲ್ ಕಾಲೇಜ್ ಪಕ್ಕದಲ್ಲಿ ಬಿ. ಇ. ಎಲ್. ಸೊಸೈಟಿಗೆ ಸೇರಿದಂಥ ಮನೆಗಳಿವೆ. ನಾನು ಅದನ್ನು ವೆರಿಫೈ ಮಾಡಿ ಅಲ್ಲಿಗೆ ಏನು ಕೆಲಸ ಆಗಬೇಕಾಗಿದೆಯೋ ಅದನ್ನು ತೆಗೆದುಕೊಳ್ಳಲಿಕ್ಕೆ ಆದೇಶ ಕೊಡುತ್ತೇನೆ.

ರಾಜ್ಯದಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನದ ಬಗ್ಗೆ

೧೧೨೪. ಶ್ರೀಮತಿ ಪೋಟಮ್ಮ (ಮೂಡಿಗೆರೆ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ, ಕ್ರೀಡೆ ಮತ್ತು ವಿವಿಧ ರಂಗದಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದಂತಹ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನ ಕೊಡಬೇಕೆಂದು ಸರ್ಕಾರ ಯಾವಾಗ ತೀರ್ಮಾನಿಸಿತು?

ಆ) ಮೇಲಿನ ತೀರ್ಮಾನದಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಜನ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ಸರ್ಕಾರದಿಂದ ಉಚಿತ ನಿವೇಶನ ಹಂಚಲಾಗಿದೆ (ಪೂರ್ಣ ಮಾಹಿತಿಯೊಂದಿಗೆ ಪಟ್ಟಿ ಕೊಡುವುದು)?

ಇ) ಈ ಸೌಲಭ್ಯ ಪಡೆಯಲು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರಿಂದ ಬಂದ ಅರ್ಜಿಗಳೆಷ್ಟು: ಹಾಗೂ ಇನ್ನು ಎಷ್ಟು ಅರ್ಜಿಗಳು ಬಾಕಿ ಇವೆ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಯಾವುದನ್ನು ತೀರ್ಮಾನಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷಣೆಯವರೇ, ನಾನು ಕೇಳಿರುವ ಪ್ರಶ್ನೆಗೆ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಜನತಾ ಸರ್ಕಾರ ಇದ್ದಾಗ ಕನ್ನಡ ಸಾಹಿತ್ಯ, ಕ್ರೀಡೆಗಳಲ್ಲಿ, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದ ವ್ಯಕ್ತಿಗಳಿಗೆ ಅವರು ಕೇಳದೆಯೇ ಸೈಟುಗಳನ್ನು ಕೊಡಬೇಕು ಎಂದು ತೀರ್ಮಾನವಾಗಿದೆ. ಇಂಟರ್‌ನ್ಯಾಷನಲ್ ಅವಾರ್ಡ್, ಸ್ಟೇಟ್ ಅವಾರ್ಡ್ ತೆಗೆದುಕೊಂಡವರಿಗೆ, ಕಲೆಗಳಲ್ಲಿ ಮತ್ತು ಸಾಹಿತ್ಯದಲ್ಲಿ ಮುಂದೆ ಬಂದವರಿಗೆ ಮತ್ತು ಸ್ಪೋರ್ಟ್ಸ್‌ನಲ್ಲಿ ಅವಾರ್ಡ್ ತೆಗೆದು ಕೊಂಡವರಿಗೆ ಸೈಟನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ನಮ್ಮ ಇದಿನಬ್ಬನವರು ಹೇಳುತ್ತಿದ್ದರು ಮಾನ್ಯ ಕೈಯಾರ ಕಿಯಣ್ಣರೈ ರವರಿಗೆ ಸೈಟ್ ಸಿಕ್ಕಿದೆ ಎಂದು ಹೇಳಿ. ಆದರೆ ಇಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ. ಒಂದು ವೇಳೆ ಹಾಗಿಲ್ಲದಿದ್ದರೆ ಯುವಜನ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ ಕೆಲವರು ಆಬ್‌ಜೆಕ್ಟ್ ಮಾಡಿದರು.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ಶ್ರೀಮತಿ ಮೋಟಮ್ಮನವರು ಕೇಳಿರುವ ಪ್ರಶ್ನೆ ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ, ಕ್ರೀಡೆ ಮತ್ತು ವಿವಿಧ ರಂಗಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನಗಳನ್ನು ಕೊಡಬೇಕೆಂದು ಸರ್ಕಾರ ಯಾವಾಗ ತೀರ್ಮಾನಿಸಿದ್ದು ಎಂದು? ಉಚಿತ ನಿವೇಶನ ಕೊಡಬೇಕೆಂದು ನಾವು ಯಾವಾಗಲೂ ತೀರ್ಮಾನ ಮಾಡಿಲ್ಲ. ಏನು ಮಾಡಿದ್ದೇವೆಂದರೆ ಔಟ್ ಆಫ್ ಟರ್ನ್‌ನಲ್ಲಿ ಇವರಿಗೆ ಕೊಡಬೇಕು ಮತ್ತು ಅವರೂ ಸಹ ಹಣವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಅವರು ಉಚಿತವಾಗಿ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೇವೆ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷಣೆಯವರೇ, ಬೆಂಗಳೂರಿನಲ್ಲಿ ಕೇಳಿದ್ದರೆ ಉಚಿತವಾಗಿ ಕೊಡಲು ಬರುವುದಿಲ್ಲ. ಒಂದು ವೇಳೆ ಅವರು ಇರುವ ಕಡೆ ಕೇಳಿದರೆ ಅಲ್ಲಿ ಉಚಿತವಾಗಿ ಕೊಡಲಿಕ್ಕೆ ಏನೂ ತೊಂದರೆ ಇಲ್ಲ: ಅವರು ಈ ರಾಜ್ಯದ ಹೆಮ್ಮೆಗೆ ಪಾತ್ರರಾಗಿರುತ್ತಾರೆ. ಅವರು ಎಲೆಯ ಮರೆಯ ಕಾಯಿಯಂತೆ ರಾಜ್ಯಕ್ಕೆ ಸೇವೆ ಸಲ್ಲಿಸಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಯನ್ನು

ಪಡೆದಿರತಕ್ಕಂಥ ವ್ಯಕ್ತಿಗಳು. ಅವರಿಗೆ ನಾವು ಸೈಟನ್ನು ಕೊಟ್ಟರೆ ನಾವು ಏನೂ ಕಳೆದುಕೊಳ್ಳುವುದಿಲ್ಲ. ದಯವಿಟ್ಟು ಎಷ್ಟು ಅಪ್ಲಿಕೇಷನ್ಸ್ ಪೆಂಡಿಂಗ್ ಇವೆ; ಎಷ್ಟು ಜನ ಅವಾರ್ಡ್ ವಿನ್ನರ್ಸ್ ಇದ್ದಾರೆ, ಅವರಿಗೆ ಕೂಡಲೇ ಸೈಟ್‌ಗಳನ್ನು ವಿತರಣೆ ಮಾಡಲಿಕ್ಕೆ ತಾವು ಆದೇಶ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣಿಯವರೇ, ನಾನು ಈಗಾಗಲೇ ಹೇಳಿದ್ದೇನೆ; ಸೈಟನ್ನು ಉಚಿತವಾಗಿ ಕೊಡಲು ಸರ್ಕಾರದ ಮುಂದೆ ಯಾವುದೇ ವಿಷಯವಿಲ್ಲ. ಅವರು ಸಲಹೆಯನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕ್ಯಾಬಿನೆಟ್ ಮುಂದೆ ಈ ವಿಚಾರವನ್ನು ತಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾವು ಅವರ ಸಲಹೆಯನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಏನು ಮಾಡಲಿಕ್ಕೆ ಆಗುತ್ತದೆನ್ನುವುದನ್ನು ನೋಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆಗೆ ಪೋಲೀಸ್ ಠಾಣೆ ತೆರೆಯುವುದು

(೨೦೯೩) ೪೦೩. ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಗೃಹ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಅಗತ್ಯವಿರುವುದು ನಿಜವಲ್ಲವೆ, ಹಾಗೂ ಅಲ್ಲಿನ ಅಪರಾಧಗಳ ಸಂಖ್ಯೆ ಹೇರಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವರ್ಷದಲ್ಲಿ ಮಂಜೂರು ಮಾಡುವ ಆಲೋಚನೆ ಏನಾದರೂ ಇದೆಯೇ?

ಇ) ಹಾಗಿದ್ದಲ್ಲಿ ಅಲ್ಲಿನ ಪೋಲೀಸ್ ಸ್ಟೇಷನ್ ಕಾರ್ಯವನ್ನು ಎಂದಿನಿಂದ ಆರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಆಬಕಾರಿ ಸಚಿವರು):-

ಅ) ಮಾನ್ಯ ಸದಸ್ಯರ ಪ್ರಶ್ನೆಯಿಂದ ಅಗತ್ಯವಿದೆಯೆಂದು ಈಗ ಗಮನಕ್ಕೆ ಬಂದಿದೆ.

ಆ) ಮತ್ತು (ಇ) ಮುಂದಿನ ವರ್ಷಗಳಲ್ಲಿ ಹಂತಹಂತವಾಗಿ ಪೋಲೀಸ್ ಠಾಣೆಗಳನ್ನು ತೆರೆಯವಾಗ ಈ ಸ್ಥಳದ ಅಗತ್ಯತೆಯನ್ನು ಗಮನದಲ್ಲಿಟ್ಟು ಕೊಳ್ಳಲಾಗುವುದು.

ಡಿ. ವೈ. ಎಸ್. ಪಿ. ಯವರ ಕಛೇರಿಯನ್ನು ರಾಮನಗರದಲ್ಲಿ ತೆರೆಯುವುದು

೪೦೮ (೨೧೬೭) ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಗೃಹ ಮತ್ತು ಆಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಗಾಗ್ಗೆ ಕೋಮುಗಲಭೆ ಮರುಕಳಿಸುವ ರಾಮನಗರಕ್ಕೆ ಒಂದು ಡಿ. ವೈ. ಎಸ್. ಪಿ. ಕಛೇರಿ ಮತ್ತು ರಾಮನಗರದ ಐಜೂರು ಬಡಾವಣೆಗೆ ಒಂದು ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ತೀರ್ಮಾನಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇವೆರಡನ್ನೂ ಯಾವಾಗ ಪ್ರಾರಂಭಿಸಲಾಗುವುದು?